ಕರ್ನಾಟಕ ವಿಧಾನಸಭೆ
ಗುರುವಾರ 5ನೇ ಆಗಸ್ಟ್ 2004 ರಂದು
ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ
ಸಭಾಂಗಣದಲ್ಲಿ ಬೆಳಿಗ್ಗೆ 9 30 ಗಂಟೆಗೆ ಸಮಾವೇಶಗೊಂಡಿತು
ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು

1) ಸಂತಾಪ ಸೂಚನೆ

ಅಧ್ಯಕ್ಷರು ಇಫ್ಕೋ ಮತ್ತು ಕ್ರಿಬ್ಕೊ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಶ್ರೀ ಪಾಲ್ ಪೋತನ್ ಅವರು ನಿಧನರಾದದ್ದನ್ನು ವಿಷಾದದಿಂದ ಸದನಕ್ಕೆ ತಿಳಿಸಬಯಸುತ್ತೇನೆ

ಇಫ್ಕೋ ಮತ್ತು ಕ್ರಿಬ್ಕೊ ಸಂಸ್ಥೆಯ ವ್ಯವಸ್ಥಾಪಕರಾದ ಶ್ರೀ ಪಾಲ್ ಪೋತನ್ ಅವರು 1961ನೇ ಜನವರಿ 3 ರಂದು ಕೇರಳ ರಾಜ್ಯದ ನಡುಮಂಗಾಡ್ ಗ್ರಾಮದಲ್ಲಿ ಜನಿಸಿದರು 1935ರಲ್ಲಿ ಭೌತ ಮತ್ತು ರಾಸಾಯನಿಕ ಶಾಸ್ತ್ರದಲ್ಲಿ ಪದವಿ ಪಡೆದು 1940ನೇ ಸಾಲಿನಲ್ಲಿ ಸಿವಿಲ್ ಇಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡಿದ ಶ್ರೀಯುತರು ಕರ್ನಾಟಕದಲ್ಲಿ ಜೋಗಜಲಪಾತದಿಂದ ವಿದ್ಯುತ್ ಉತ್ಪಾದನೆ ಮಾಡುವಲ್ಲಿ ಇಂಜಿನಿಯರ್ ಆಗಿ ಸೇವೆ ಸಲ್ಲಿಸಿರುವುದು ಸ್ಮರಣೀಯವಾದುದು ರಾಷ್ಟ್ರದ ಅತ್ಯುನ್ನತ ಗೊಬ್ಬರ ಸಂಸ್ಥೆಯಾದ ಇಫ್ಕೋ ಮತ್ತು ಕ್ರಿಬ್ಕೊ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾಗಿ ಕೆಲಸ ನಿರ್ವಹಿಸಿದ್ದುದಲ್ಲದೆ, ಎಫ್ ಎ ಒ, ಯು ಎನ್ ಐ ಡಿ ಒ ಮತ್ತು ವಿಶ್ವಬ್ಯಾಂಕ್‌ಗೆ ಸಲಹೆಗಾರರಾಗಿ ಸೇವೆ ಸಲ್ಲಿಸಿದ್ದರು 1977ರಲ್ಲಿ ಪದ್ಮಶ್ರೀ ಪ್ರಶಸ್ತಿಯನ್ನು ಸಹ ಪಡೆದಿರುತ್ತಾರೆ

ಶ್ರೀಯುತರು ದಿನಾಂಕ 3ನೇ ಆಗಸ್ಟ್ 2004ರಂದು ನಿಧನ ಹೊಂದಿದರು

ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು) ಮಾನ್ಯ ಅಧ್ಯಕ್ಷರೇ, ಪಾಲ್ ಪೋತನ್ ಅವರು ಒಬ್ಬ ಟೆಕ್ನೋಕ್ರಾಟ್ ಅವರು ಸಹಕಾರಿ ರಂಗದಲ್ಲಿ ಇಫ್ಕೋ ಮತ್ತು ಕ್ರಿಬ್ಕೊ ಸಂಸ್ಥೆಗಳನ್ನು ಹುಟ್ಟುಹಾಕಿ ಇಡೀ ಪ್ರಪಂಚದಲ್ಲೇ ಸಹಕಾರಿ ಸಂಸ್ಥೆಗಳನ್ನು ಯಾವ ರೀತಿ ನಡೆಸಬೇಕೆನ್ನುವುದನ್ನು ತೋರಿಸಿಕೊಟ್ಟಿದ್ದಾರೆ ನನಗಂತೂ ಅನಿಸುತ್ತದೆ, ಪಾಲ್ ಪೋತನ್ ಅವರು ಮತ್ತು ಕುರಿಯನ್ ಅವರು ಇವರಿಬ್ಬರೂ ಕೂಡ ಅದೇ ರಾಜ್ಯದವರಾಗಿ ಪಾಲ್ ಪೋತನ್‌ರವರಿಂದ ಪ್ರೇರಿತವಾಗಿ ಕುರಿಯನ್ ಅವರೂ ಕೂಡ ಬಹಳ ಒಳ್ಳೆಯ ಕೆಲಸವನ್ನು ಹಾಲು ಸಂಸ್ಕರಣೆಯಲ್ಲಿ ಮಾಡುತ್ತಿದ್ದಾರೆ ಮಾನ್ಯ ಪಿ ವಿ ನರಸಿಂಹರಾವ್‌ರವರಿದ್ದಾಗ ಪಾಲ್ ಪೋತನ್‌ರವರು ರಿಟೈರ್ಡ್ ಆದ ಮೇಲೂ ಕೂಡ ಇಫ್ಕೊ ಸಂಸ್ಥೆಗೆ ಅವರನ್ನು ನಾಮ ನಿರ್ದೇಶಕ ಮಾಡಿದ್ದರು ಅವರ ಜೊತೆಯಲ್ಲಿ ಮೂರು ವರ್ಷಗಳ ಕಾಲ ಕೆಲಸ ಮಾಡುವಂಥ ಅವಕಾಶ ನನಗೂ ಲಭಿಸಿತ್ತು ಅವರಿಗೆ ನಮ್ಮ ರಾಜ್ಯದ ಮೇಲೆ ಇದ್ದ ಕಳಕಳಿ ಅವತ್ತೂ ಕೂಡ ಕರೆಂಟ್‌ನ ಬಗ್ಗೆ ಇನ್ನು ಎಷ್ಟು ಪ್ರಾಜೆಕ್ಟ್‌ಗಳನ್ನು ಮಾಡಿದ್ದೀರಿ, ಇದೆಲ್ಲಾ

ಕೇಳುತ್ತಿದ್ದರು ಅವರು ಕನ್ನಡದಲ್ಲಿ ಬಹಳ ಸ್ವಚ್ಛವಾಗಿ ಮಾತನಾಡುತ್ತಿದ್ದರು ಇಂಥ ಸಂಸ್ಥೆಗಳಲ್ಲಿ ಅಧ್ಯಕ್ಷರಾಗಿರುವವರಲ್ಲಿ ಈಗ ಇತ್ತೀಚಿನ ದಿನಗಳಲ್ಲಿ ಸಹಕಾರಿ ರಂಗದಲ್ಲಿ ಎಲ್ಲಾ ಬೊಟ್ಟು ಮಾಡಿ ತೋರಿಸುವಂಥದ್ದು ಇದ್ದರೂ ಕೂಡ ಇವರು ಕಟ್ಟಿದಂಥ ಆ ಸಹಕಾರ ಸಂಘಗಳು ಇವತ್ತು ಮೂವತ್ತಮೂರು ವರ್ಷಗಳಿಂದಲೂ ಲಾಭದಲ್ಲೇ ನಡೆಯುತ್ತಿವೆ ಮೂವತ್ತಮೂರು ವರ್ಷಗಳಿಂದಲೂ ಕೂಡ ಡಿವಿಡೆಂಡನ್ನು ಕೊಡುತ್ತಾರೆ ಈ ಸಾರಿ ಕೂಡ ಹಿಂದೆ ನಾನು ಅದರ ಅಧ್ಯಕ್ಷನಾಗಿದ್ದೆ ಅವರು ಹಾಕಿದ ಆ ತಳಪಾಯ ನಿಜವಾಗಲೂ ಕೂಡ ಸ್ಮರಣೀಯ ಏನಾಗುತ್ತದೆ ಎಂದರೆ ಕೆಲವು ಅಧಿಕಾರಿ ವರ್ಗದವರು ಎಲ್ಲರೂ ಎಂದು ನಾನು ಹೇಳುವುದಿಲ್ಲ ಕೆಲವರು ಅವರು ಸ್ವತಃ ಸ್ವರ್ಗದಿಂದಲೇ ಬಂದ ಹಾಗೆ ಅಧಿಕಾರ ಸಿಕ್ಕಿದಾಗ ಯೋಚನೆಯನ್ನು ಮಾಡುತ್ತಾರೆ ಅವರ ತಾಯಿಯ ಊಂಬ್‌ನಿಂದ ಒಂದಿರುವುದನ್ನು ಮರೆತೇಬಿಟ್ಟಿರುತ್ತಾರೆ ಅಂಥ ಪರಿಸ್ಥಿತಿಯಲ್ಲಿ ಇವರು ಒಬ್ಬ ಟೆಕ್ನೊಕ್ರಾಫ್ಟ್ ಆಗಿ ಇವತ್ತು ಇಡೀ ದೇಶ, ಇಡೀ ಪ್ರಪಂಚದ ಗಮನವನ್ನು ಸೆಳೆದಂಥವರು ಇವರು ಮೊನ್ನೆ ತೀರಿಕೊಂಡಿದ್ದರಿಂದ ನಿಜವಾಗಲೂ ಕೂಡ ಇದೊಂದು ದೊಡ್ಡ ಅಘಾತ, ಇವರಿಗೆ ಪದ್ಮಶ್ರೀ ಪ್ರಶಸ್ತಿಯನ್ನು 77ನೇ ಇಸವಿಯಲ್ಲಿ, ಏನು ಸರ್ಕಾರ ಕೊಟ್ಟಿದೆ ಇಂಥವರನ್ನು ನಾವು ಕಳೆದುಕೊಂಡಿದ್ದೇವೆ ಇವರು ಸಹಕಾರಿ ವ್ಯವಸ್ಥೆಯಲ್ಲಿ ಬಹಳಷ್ಟು ಚಿಂತನೆಯನ್ನು ಇಟ್ಟುಕೊಂಡಂಥವರು ಶ್ರೀಮತಿ ಇಂದಿರಾಗಾಂಧಿಯವರು ಅವರ ಜಮೀನನ್ನು ಕಾರ್‌ಡೇಟ್‌ಗೆ ಕೊಟ್ಟಿದ್ದರು ಆ ಜಮೀನನ್ನು ನಾನು ಹೋದಾಗೆಲ್ಲ, ನಾನು ಅಧ್ಯಕ್ಷನಾದ ಮೇಲೆ ಕೇರಳಕ್ಕೆ ಹೋಗಿ ಅವರನ್ನು ನೋಡಲು ಹೋಗಿದ್ದೆ ಆ ಜಮೀನನ್ನು ಏನೇನು ಮಾಡಿದ್ದೀರಿ, ಅದನ್ನು ಯಾವ ರೀತಿ ರೈತರಿಗೆ ಉಪಯೋಗವಾಗುವ ಹಾಗೆ ಮಾಡಿದ್ದಾರೆ ಎನ್ನುವುದನ್ನೆಲ್ಲಾ ನೋಡಿಕೊಂಡು ಬರುವ ಆ ಕಾಳಜಿ ಇಳಿವಯಸ್ಸಿನಲ್ಲೂ ಕೂಡ ಅವರಿಗೆ ಇತ್ತು ಆ ರೀತಿ ಕಾಳಜಿ ಇದ್ದ ಮಾನ್ಯ ಪಾಲ್ ಪೋತನ್ ಅವರು ತೀರಿಕೊಂಡಿರುವುದರಿಂದ ನಿಜವಾಗಲೂ ಕೂಡ ರಾಷ್ಟ್ರಕ್ಕೆ ಒಂದು ತುಂಬಲಾರದ ನಷ್ಟವುಂಟಾಗಿದೆಯೆಂದು ಹೇಳುತ್ತಾ ಇವತ್ತೂ ಕೂಡ ಆ ಸಂಸ್ಥೆಗಳು ನಡೆಯಬೇಕಾದರೆ ಈಗಿರುವಂಥ ಮ್ಯಾನೇಜಿಂಗ್ ಡೈರೆಕ್ಟರ್ ಕೂಡ ಅಷ್ಟೇ ಚೆನ್ನಾಗಿ ನಡೆಸುತ್ತಾರೆ ಹಾಗಾಗಿ ಆ ತಳಪಾಯವನ್ನು ಒಂದು ಸಾರಿ ಸರಿಯಾಗಿ ಹಾಕಿದರೆ ಇಡೀ ದೇಶಕ್ಕೆ ತೋರಿಸುವ ಮಾರ್ಗದರ್ಶನವನ್ನು ಕೊಟ್ಟ ಪಾಲ್ ಪೋತನ್ ಅವರೂ ಕೂಡ ಸ್ಮರಣೀಯ ಎಂದು ಹೇಳುತ್ತಾ ಮಾನ್ಯ ಅಧ್ಯಕ್ಷರು ಏನು ಸಂತಾಪ ಸೂಚನೆಯನ್ನು ಸೂಚಿಸಿದ್ದಾರೆ, ಅದಕ್ಕೆ ನಾನು ನನ್ನ ಸಹಮತವನ್ನು ಕೊಡುತ್ತ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಬಿ.ಎಸ್ ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ತಾವು ತಂದಿರುವಂಥ ಈ ಸಂತಾಪ ಸೂಚನೆ ಇಷ್ಟೊ ಮತ್ತು ಇನ್ನೂ

ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದಂಥ ಶ್ರೀ ಪಾಲ್ ಪೋತನ್ ಅವರು ನಿಧನರಾಗಿದ್ದಾರೆ, ಮತ್ತೆ ಕರ್ನಾಟಕ ಜೋಗಜಲಪಾತದ ವಿದ್ಯುತ್ ಉತ್ಪಾದನೆ ಮಾಡಲು ಅವರು ಇಂಜಿನಿಯರಾಗಿ ಸೇವೆಯನ್ನು ಸಲ್ಲಿಸಿದ್ದರು ಪದ್ಮಶ್ರೀ ಪ್ರಶಸ್ತಿಯನ್ನು ಕೂಡ ಪಡೆದಿದ್ದರು ಅವರ ಆತ್ಮಕ್ಕೆ ಶಾಂತಿ ಕೋರುವಂಥದ್ದು, ಅವರ ಕುಟುಂಬಕ್ಕೆ ಒಂದು ದೊಡ್ಡ ಸೇವೆ ಮಾಡಿದಂಥ ವ್ಯಕ್ತಿಗೆ ಈ ದು ಖವನ್ನು ತಡೆಯುವಂಥ ಶಕ್ತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ ಮತ್ತೆ ಇನ್ನೊಂದು ತಾವು ಅಪಾರ್ಥ ಮಾಡಿಕೊಳ್ಳದಿದ್ದರೆ ದಯಮಾಡಿ ಸಂತಾಪ ಸೂಚನೆಯನ್ನು ತರುವುದಕ್ಕೆ ಮುಂಚೆ ತಾವು ಹತ್ತು ಬಾರಿ ಯೋಚನೆಯನ್ನು ಮಾಡಬೇಕಾಗುತ್ತದೆ ಒಂದು ಬಾರಿ ನೀವೇನಾದರೂ ಈ ಪದ್ಧತಿಯನ್ನು ತಂದುಬಿಟ್ಟರೆ ನನಗನ್ನಿಸುತ್ತದೆ, ಬಹಳ ಇಕ್ಕಟ್ಟಿಗೆ ನೀವು ಸಿಕ್ಕಿಕೊಳ್ಳುತ್ತೀರಿ, ನಮ್ಮ ರಾಜ್ಯದ ಅನೇಕ ಗೌರವಾನ್ವಿತ ದೊಡ್ಡ ದೊಡ್ಡ ಹಿರಿಯ ಸಾಹಿತಿಗಳು, ದೊಡ್ಡ ದೊಡ್ಡ ಹಿರಿಯ ವ್ಯಕ್ತಿಗಳು ನಿಧನರಾದಾಗ ಸಂತಾಪ ಸೂಚನೆಯನ್ನು ಮಾಡುವುದಕ್ಕೆ ತಮ್ಮ ಕೊರಡಿಯಲ್ಲಿ ಹತ್ತು ಸಾರಿ ಚರ್ಚೆಯನ್ನು ಮಾಡಿ ಕೊನೆಗೆ ಒಟ್ಟಾಗಿ ಸೇರಿ ತರುತ್ತೇವೆ ನೀವೇನಾದರೂ ಈ ಪದ್ಧತಿಯನ್ನು ಹಾಕಿಕೊಂಡು ಬಿಟ್ಟರೆ ನಾಳೆ ಯಾವ ಅಪಾದನೆಗೆ ಈ ಮನೆ ಗುರಿಯಾಗಬೇಕಾಗುತ್ತದೆ ಎಂದರೆ ಏನಪ್ಪ ಇವತ್ತು ಯಾರೋ ಒಬ್ಬರು ಸೇವೆ ಸಲ್ಲಿಸಿದಂಥ ಇಂಜಿನಿಯರ್‌ಗೆ ಪದ್ಮಶ್ರೀ ಪ್ರಶಸ್ತಿಯನ್ನು ಪಡೆದಿದ್ದರು ಎಂದು ಸಂತಾಪ ಸೂಚನೆಯನ್ನು ತಂದಿರಿ, ಆದರೆ ಉಳಿದ ಅತಿರಥ ಮಹಾರಥ ಗಣ್ಯವ್ಯಕ್ತಿಗಳು ದೈವಾಧೀನರಾದಾಗ ಕರ್ನಾಟಕದಲ್ಲಿ ಇದರ ಪ್ರಸ್ತಾಪವೇ ಆಗಲಿಲ್ಲ ಎನ್ನುವಂಥದ್ದು ಇದೊಂದು ಕೆಟ್ಟ ಸಂಪ್ರದಾಯವಾಗುತ್ತದೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ ನಾನು ನಿಮ್ಮನ್ನು ಪ್ರಶ್ನೆ ಮಾಡುತ್ತಿಲ್ಲ ತಾವು ಏನು ಹೇಳುತ್ತೀರಿ, ಅದಕ್ಕೆ ಗೌರವವನ್ನು ಕೊಡುತ್ತೇವೆ ಆದರೆ ಕೊರಡಿಯಲ್ಲೇ ಬಂದು ನಾನು ಹೇಳಬಹುದಾಗಿತ್ತು ಆದರೆ ಇಲ್ಲಿ ಏಕೆ ಹೇಳುತ್ತಿದ್ದೇನೆಂದರೆ ದಯಮಾಡಿ ಇನ್ನು ಮುಂದೆ ಇದರ ಬಗ್ಗೆ ಬಹಳ ಎಚ್ಚರಿಕೆಯಿಂದ ಸಮಾಲೋಚನೆ ಮಾಡಿ ಇದನ್ನು ತರಬೇಕೇ ಹೊರತು ಇಲ್ಲದಿದ್ದರೆ ಮುಂದೆ ನೀವೇ ಇಕ್ಕಟ್ಟಿಗೆ ಸಿಲುಕಿಕೊಳ್ಳುತ್ತೀರಿ ಈ ಮನೆ ಇಕ್ಕಟ್ಟಿಗೆ ಸಿಲುಕಿಕೊಳ್ಳಬೇಕಾಗುತ್ತದೆ ಇಷ್ಟು ಮಾತ್ರ ನಾನು ಈ ಸಂತಾಪ ಸೂಚನೆಗೆ ಬೆಂಬಲ ಕೊಡುವುದು, ಅವರು ಬಹಳ ಹಿರಿಯರಿದ್ದಾರೆ, ಅದರ ಬಗ್ಗೆ ಎರಡು ಮಾತಿಲ್ಲ ಆದರೆ ದಯಮಾಡಿ ತಾವು ಮುಂದೆ ಈ ರೀತಿ ತರುವುದಕ್ಕೆ ಮುಂಚೆ ಹತ್ತು ಸಾರಿ ಯೋಚನೆ ಮಾಡಿ ಸಂತಾಪ ಸೂಚನಾ ನಿರ್ಣಯಗಳನ್ನು ತರಬೇಕೆಂದು ಈ ಸ್ಥಾನದಲ್ಲಿ ನಿಂತು ನನ್ನ ಜವಾಬ್ದಾರಿ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತೇನೆ ಸರ್ಕಾರ ಅದನ್ನು ಒಪ್ಪಿಕೊಳ್ಳುತ್ತದೆ ಎಂದು ತಿಳಿದುಕೊಂಡಿದ್ದೇನೆ I am sorry sir ಇನ್ನು ಮುಂದೆ ಈ ರೀತಿಯದು ಆಗಬಾರದು

ಅಧ್ಯಕ್ಷರು ಎಲ್ಲರೂ ಎದ್ದು ನಿಂತು ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೋರುತ್ತೇನೆ

(ಸದನದ ಎಲ್ಲಾ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು ಮಾನ್ಯ ಯಡಿಯೂರಪ್ಪನವರು ಏನು ಹೇಳಿದರು, ಅದರ ಬಗ್ಗೆ ಈ ಪಾಲ್ ಪೋತನ್ ಅವರು ನಿಧನರಾಗಿರುವುದನ್ನು ನನ್ನ ಗಮನಕ್ಕೆ ಮಾನ್ಯ ಕೃಷಿ ಸಚಿವರು ತಂದರು ಇಂಥ ಸಂಪ್ರದಾಯ ಹಿಂದೆ ಆಗಿದೆಯೇ ಎಂದು ನನ್ನ ಕಾರ್ಯದರ್ಶಿಯ ಗಮನಕ್ಕೆ ತಂದಾಗ ಆಗಿದೆ ಎಂದು ಹೇಳಿದ ಮೇಲೆ ಆ ರೀತಿ ಆಗಿದ್ದರೆ ಇದನ್ನು ಹಾಕಿಕೊಳ್ಳಿ ಎಂದು ನಾನು ಹೇಳಿದೆ

ಶ್ರೀ ಬಿ ಎಸ್ ಯಡಿಯೂರಪ್ಪ ಸರ್ಕಾರವನ್ನು ಕೇಳಿ

ಅಧ್ಯಕ್ಷರು ಯಾವ ರೀತಿ ಏನು ಎಂದು ಸ್ಪಷ್ಟವಾಗಿ ಚರ್ಚೆ ಮಾಡಿ ಮುಂದೆ ಮಾಡೋಣ

ಶ್ರೀ ಬಿ ಎಸ್ ಯಡಿಯೂರಪ್ಪ ಚರ್ಚೆ ಬೇಡಿ ಗಮನಿಸೋಣ

ಅಧ್ಯಕ್ಷರು ಈಗ ಪ್ರಶ್ನೋತ್ತರ

2 ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ರಾಜ್ಯದ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗದೇ ಇರುವ ಪ್ರಕರಣಗಳ ಬಗ್ಗೆ

106(682) ಶ್ರೀ ರಾಜೇಂದ್ರ ವರ್ಮ (ಹುಲಸೂರ್) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಲಸೂರು ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಯಾವ ಯಾವ ರಸ್ತೆ ಕಾಮಗಾರಿಗಳನ್ನು ಸರ್ಕಾರ ಕೈಗೊಂಡಿರುವುದು,

ಅ) ಈಗಾಗಲೇ ಕೈಗೊಂಡಿರುವ ಅಪೂರ್ಣಗೊಂಡಿರುವ ರಸ್ತೆ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು ಹಾಗೂ ಅವುಗಳ ಅಂದಾಜು ವೆಚ್ಚವೆಷ್ಟು, (ವಿವರ ನೀಡುವುದು)?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹುಲಸೂರು ಮತಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ಕೈಗೊಂಡ ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ

ಆ) ಕೇಂದ್ರ ರಸ್ತೆ ನಿಧಿಯಡಿಯಲ್ಲಿ ಹಾಲಿ ಪ್ರಗತಿಯಲ್ಲಿರುವ ಮದಗಟ್ಟಿ ಕ್ರಾಸ್‌ನಿಂದ ಗೊರ್ಟ ಮುಚಲಮ್ ಮಾರ್ಗ ಬಸವಕಲ್ಯಾಣ ರಸ್ತೆ ಅಭಿವೃದ್ಧಿ ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ (ಅಂದಾಜು ರೂ 100 ಲಕ್ಷ ಮತ್ತು ವೆಚ್ಚ ರೂ 50 00 ಲಕ್ಷಗಳು)